ಮೈಮುರಿದು ಅರ್ಕಂಡೊಯ್ತದಂತೆ. ಸದ್ಯ! ಅವತ್ತು ಯಾರ ಜೀವಕ್ಕೂ ಏನೂ ಅಪಾಯ ಆಗ್ಲಿಲ್ಲ.' ಇಂತಲ್ಲಿಗೆ ಮಂಡಲ್ ವರದಿ ಮುಗಿಯಿತು.

ಯಾಕೊ ಒಂದು ಬೆಳಿಗ್ಗೆ ಚಾಲಕ ಮುಖ ಊದಿಸಿಕೊಂಡು ಕುಳಿತಿದ್ದ. 'ಊಂ, ಇನ್ನೇನು ಮಾಡಕ್ಕೆ ಕೇಮೆ ಇಲ್ಲ. ಇವಳ ಮನೆಗೆ ಓಗ್ಬೇಕಂತೆ' ಎಂದು ಗೊಣಗೊಣ ಅಂತಿದ್ದ. ಆತನಿಗಾಗಿ ಕಾಫಿ ತಂದವಳು ಹಾಗೆ, ನೆರಳಿನಲ್ಲಿ ನಾನೂ ಕಾಫಿ ಕುಡಿಯುತ್ತ ಕುಳಿತೆ. ಈ ಗೊಣಗಲಾಟ ಕೇಳಿ ಸಾಕಾಗಿ ಅದ್ಯಾರನ್ನ ಹಂಗೆ ಬಯ್ಕೊತಿದಿರಲ್ಲಾ ಎಂದು ಕೇಳಿದೆ. 'ಅವಳೇ ನನ್ ಮಾವನ ಮಗಳು, ಅವ್ಳು ರೂಪ್ ಸುಡಾ' ಎಂಬ ಉತ್ತರ ಬಂತು. 'ಅದೇನು ನೆಟ್ಟಗೆ ಹೇಳಿ, ಅವಳ ರೂಪ ಯಾಕೆ ಸುಡಬೇಕು?' ಆಗ ವಾಗ್ಝರಿ ಹರಿಯಿತು. 'ನಮ್ಮ ಮಾವ್ನ ಮಗಳಿಗೆ ಒಬ್ಬ ಮಗ, ಒಬ್ಳು ಮಗಳು. ಸರ್ಕಾರ ಅವಳ ಜಮೀನು ತಕ್ಕಂಡು ಕೊಟ್ಟ ದುಡ್ಡು ಬೇಜಾನ್ ಐತೆ ಅವಳತ್ರ. ಅದರ ಮಸ್ತಿ ಅಂಗಾಡಿಸ್ತೈತೆ. ಇವ್ಳ ಮಗಳು ಅಂತ ರೂಪಸ್ಥೆ ಅಲ್ಲ. ಕುಳ್ಳಿ, ಕಪ್ಪು. ಇಲ್ಲಿ ಯಾರೂ ಗಂಡುಗಳು ಮೂಸಲಿಲ್ಲ. ಊಟಿ ಕಡೆ ಉಡುಗ ಒಬ್ಬ ಇಲ್ಲೇ ಆಸ್ಪತ್ರೇಲಿ ಅದು ಇದು ಕೆಲಸ ಮಾಡ್ಕಂಡಿದ್ದ. ಅವ್ನ ಇಡಿದು ಮಗಳ್ನ ಗಂಟಾಕಿದ್ರು. ಅವ್ನು ತಂದೆತಾಯಿಗೆ ಒಬ್ಬನೇ ಮಗ. ಊಟೀಲಿ ಅವನ್ಗೆ ಒಸಿ ಜಮೀನೂ ಇತ್ತು. ಕೋಸು, ಕ್ಯಾರಟ್ಟು ಬೆಳ್ಕಂಡಿದ್ರು. ಸರಿ, ಮದ್ವೆ ಆಗಿ ಒಂದು ಮಗಾನೂ ಆಯ್ತು. ಅಳಿಯನ ಅಪ್ಪ ಸತ್ತೋದ, ಅವ್ವ ಒಂಟಿ ಆದ್ಲು. ಅವ್ಳು ಮಗನ್ನ ಇಲ್ಲೇ ಬಾರಪ್ಪ, ನಾನೊಬ್ಳೆ ಅಂತ ಕರಿತಾ ಇದ್ಲು. ಈ ಉಡ್ಗಿ ನಾನೊಲ್ಲೆ; ನಿಮ್ಮೂರು 'ಚಳಿ ಸೀತ' ಅಂತ ಕೊಸರಾಡುತಿದ್ಲು. ಈ ಗಂಡ ಏನ್ಮಾಡಬೇಕು? ಬಲ್ ಇಕ್ಕಟ್ಟಾಯಿತು. ಆಗ ನಮ್ 'ಮಾವನ ಮಗಳು ಕಳ್ ನನ್ ಮಗಳು' ಅಂತಿಂಥವಳಲ್ಲ ಮಾಟಗಾತಿ ಏನ್ಮಾಡಿದ್ಲು ಗೊತ್ತೇ? ಗಂಡ ಎಡ್ತಿ ಸೇರಿ ಇಕ್ಮತ್ ಮಾಡಿದ್ರು. ಅಳಿಯ ಕೆಲಸ ಮಾಡ್ತಿದ್ದ ಆಸ್ಪತ್ರೇಲಿ ಒಬ್ಬ ಕಸ ಗುಡಿಸೋನು ಇದ್ದ. ಅವನು ಬಲ್ ಕುಡ್ಕ. ಅವನ್ಗೆ ಚೆನ್ನಾಗಿ ಕುಡ್ಸಿ ಕೈಗೆ ಒಂದಷ್ಟು ಕ್ಯಾಷು ಕೊಟ್ಟು ತಯಾರ್ ಮಾಡಿದ್ರು. ಆ ಕುಡುಕ ಈ ಮಾಟಗಾತಿಯ ಅಳಿಯನ ಮೇಲೆ ದೂರು ಕೊಟ್ಟ. ಏನಂತ ಕೊಟ್ಟ? ಇವ್ನು ನನ್ ಎಡ್ತೀನ ಮಡಿಕಂಡವ್ನೆ. ನನ್ನ ಸಂಸಾರ ಆಳಾಯ್ತು ಅಂತ. ಇಷ್ಟೆ ಸಾಕು ಅಂತ, ಅವ್ವನಿಂದ ತಯಾರಿ ತಗಂಡಿದ್ದ ಮಗಳು ಇವ್ನ ಚಾಳಿ ಸರಿಗಿಲ್ಲ, ಇವ್ನ ಜತೆ ನಾನು ಸಂಸಾರ ಮಾಡಾಕಿಲ್ಲ ಅಂತ ಪಟ್ಟಾಕ್ಕಂಡು ಕೂತ್ಲು. ಡೈವರ್ಸ್ ಗಂಟ ಓಯ್ತು. ಆ ಅಳಿಯ ನಮ್ಮತ್ರಕ್ಕೆಲ್ಲಾ ಬಂದು 'ನಾನು ಅಂತವ್ನಲ್ಲ. ಇವ್ಳು ಯಾಕಿಂಗಾಡ್ತರೊ ಗೊತ್ತಿಲ್ಲ. ಇವ್ಳು ಗಂಡ ಎಣ್ತೀನ ಅಗಲಿಸ್ತಾ ಅವ್ರೆ. ಡೈವರ್ಸಾದರೆ ನನ್ನ ಮಗನ ಗತಿ ಏನು? ನೀವ್ಯಾರಾದ್ರೂ ಅವ್ರಿಗೆ ಬುದ್ಧಿ ಏಳಿ ಅಂತ ಕೇಳ್ಕಂಡ. ನಾವು ನಿಮ್ಮತ್ತೆ ಮಾಟಗಾತಿ, ದಿನ ಬೆಳಗಾದ್ರೆ ಮಾಟಕೂಟ್ಲ ಮಾಡಿಸೋದೇ ಅವಳ ಕಸುಬು. ನಮಗೆ ಮಕ್ಕಳು, ಮೊಮ್ಮಕ್ಕಳು ಅವೆ. ಇವಳ್ಗೆ ಬುದ್ಧಿ ಏಳಕ್ಕೆ ಓಗೋದು, ಅವಳು ಸಿಟ್ ಮಾಡ್ಕಂಡು ನಮ್ಗೇ ತಿರಗ್ಸಿ ಮಾಟ ಮಾಡಿಸಿದ್ರೆ ಏನ್ಮಾಡೋದು? ಅಪ್ಪ, ಅವಳ್ದು ಕೆಟ್ಟ ಸಾವಾಸ. ನಿಂಗೆ ಅವಳಿಲ್ಲದಿದ್ರೆ ಇನ್ನೊಬ್ಬಳು ಎಡ್ತಿ ಸಿಕ್ತಾಳೆ. ಸುಮ್ನೆ ನಿಮ್ಮೂರಿಗೆ ಓಗಿ ನಿಮ್ಮವ್ವ, ಮನೆಮಠ ನೋಡ್ಕೊ ಅಂತ ಬುದ್ಧಿ ಏಳಿ ಕಳಿಸ್ದೆ. ನೋಡಿದ್ರಾ ಕಳ್ನನ್ ಮಗಳ ಇಕ್ಮತ್ತು? ಅದಕ್ಕೆ ಅವಳು ಯಾತಕ್ಕಾದ್ರೂ ಮಾತಾಡಿಸಿದ್ರೆ, ಕರದ್ರೆ ಜಾರ್ಕಂಬುಡ್ತೀವಿ' ಎಂದು ತನ್ನ ಕಥಾನಕವನ್ನು ಚಾಲಕ ಮುಗಿಸಿದ.

*****

ಮನೆಯಲ್ಲಿ ತರಕಾರಿ, ಹಣ್ಣು ಮುಗಿದುಹೋಗಿತ್ತು. ನೆಂಟರು ಬರುವವರಿದ್ದರು. ನಮ್ಮ ಮೊಹಲ್ಲಾದ ರಸ್ತೆ ಪಕ್ಕದ ಮಾರ್ಕೆಟ್‌ಗೆ ಹೋಗಿ ಅರ್ಜೆಂಟಾಗಿ ತರಕಾರಿ ತರಬೇಕು ಅಂತ ನಮ್ಮ ಆಟೊವಾಲನನ್ನು ಕರೆದೆ. ನಮ್ಮ ಹತ್ತಿರದ ಮಾರ್ಕೆಟ್‌ಗೆ ಬರಲು ಎಳೆದಾಡಿದ ಚಾಲಕ ಕೊನೆಗೆ 'ಅಲ್ಲಿಗೆ ನಾನು ಬರಾಕಿಲ್ಲಪ್ಪ, ಎದುರ್ಗೆ ಪೊಲೀಸ್ ಟೇಸನ್ ಐತೆ' ಅಂದ. ಅಯ್ಯೊ! ಅಲ್ಲಿ ಸ್ಟೇಷನ್